ಅಲ್ಲಿ ಇಲ್ಲಿ ತಿಂತಾನೆ. ಆದರೆ, ಅರ್ಜಿ ಕೊಡೋಕೆ ಒಂದು ವಿಳಾಸವಂತೂ ಬೇಕಲ್ಲಾ? ಅದಕ್ಕೆ ಅವನು ಯಾರದಾದರೂ ಮನೆ ವಿಳಾಸ ತಗೊಂಡು ಅರ್ಜಿ ಕೊಡ್ತಾನಂತೆ. ಎಂಥ ಜಗತ್ತು, ಇಷ್ಟು ಸಹಾಯ ಮಾಡೋಕೆ ಯಾರೂ ತಯಾರಿಲ್ಲ ದಾದಾ! ಹೋಗು, ದೂರ ಹೋಗು ಅಂತ ತಳ್ಳಿಬಿಟ್ಟಿದ್ದಾರೆ, ಹೊಡೆದು ಓಡಿಸಿಬಿಟ್ಟಿದ್ದಾರೆ."

ಅಸಿತ್ ತಂಗಿಯ ಈ ಕರುಣಾಹೃದಯದ ಪರಿಚಯಕ್ಕೆ ಕರಗಿದಂತೆ ಅನಿಸಲಿಲ್ಲ. ಅದರ ಬದಲು ತೀಕ್ಷ್ಣಗೊಂಡು ಹೇಳಿದ, "ಆಹಾ! ಇಡೀ ಜಗತ್ತಿನಲ್ಲಿಯೇ ಕರುಣಾಮಯಿ ನೀನು. ವಿಳಾಸ ಕೊಡ್ತೀನಿ ಅಂತ ಆಶ್ವಾಸನೆ ಕೊಟ್ಟಿದ್ದಿಯಾ?"

ಸುಲತಾ ವಾಗ್ಯುದ್ಧಕ್ಕೆ ತಯಾರಾಗಿಯೇ ಹೇಳಿದಳು, "ಕೊಟ್ಟರೆ ನಷ್ಟವೇನು ಹೇಳು ನೀನು? ಅವನು ಅರ್ಜಿ ಕೊಡ್ತಾನೆ, ಅದಕ್ಕೆ ಉತ್ತರ ಈ ಮನೆಗೆ ಬರುತ್ತೆ, ಇಷ್ಟೇ ಕೆಲಸ. ಇದರಲ್ಲಿ ಹೆದರಿಕೊಳ್ಳಬೇಕಾದ್ದೇನಿದೆ? ಅವನು ಫುಟ್‌ಪಾತ್ ವಿಳಾಸ ಕೊಡೋಕೆ ಆಗುತ್ತೇ?"

ಕೋಪದಿಂದ ಕ್ಷುದ್ರನಾದ ಅಸಿತ್ ಹಣೆಗೆ ಕೈಯಿಟ್ಟು ಕುಳಿತ, ಮುಖ ಕಪ್ಪಿಟ್ಟಿತು; ನುಡಿದ, "ತಲೆಯಲ್ಲಿ ಬುದ್ಧಿಯಿದ್ದರೆ ಅರ್ಥಮಾಡಿಕೊಳ್ಳುತ್ತಿದ್ದೆ ಭಯ ಯಾಕೆ ಅಂತ. ಜಗತ್ತಲ್ಲಿ ಯಾವ್ಯಾವ ತರದ ಜನರಿದ್ದಾರೆ ಗೊತ್ತೇ? ಅವನು ಸರ್ಕಾರಕ್ಕೆ ಅರ್ಜಿ ಕೊಡಬೇಕು ಅಂತಿರೋದು ಒಂದು ಮೋಸಗಾರಿಕೆಯೇ ಹೊರತು ಬೇರೇನೂ ಅಲ್ಲ. ಅವನು ಸ್ಮಗ್ಲರ್ ಇರಬಹುದು. ಸ್ವಂತ ವಿಳಾಸ ಕೊಡೋದಿಲ್ಲ, ಸಿಕ್ಕಿಹಾಕಿಕೊಂಡರೆ ಇನ್ಯಾರೋ ಸಿಕ್ಕಿಹಾಕಿಕೊಳ್ತಾ, ಅದೂ ಅಲ್ಲದೆ ಈ ಅರ್ಜಿಯೇ ಅವರ ಕೋಡ್".



"ಅಲ್ಲಾ ದಾದಾ, ಈ ಜಗತ್ತಲ್ಲಿ ಪ್ರಾಮಾಣಿಕರೇ ಇಲ್ವೇ?" ಸುಲತಾ ಕೆನ್ನೆ ಮೇಲೆ ಬೆರಳಿಟ್ಟು ಕೇಳಿದಳು.

"ಇದಾರೆ, ಆದರೆ ನೀನು ಹೇಗೆ ಕಂಡುಹಿಡಿತೀಯಾ? ಜಗತ್ತಲ್ಲಿ ಕಳ್ಳರು, ದುಷ್ಟರು, ಮೋಸಗಾರರೇ ತುಂಬಿದ್ದಾರೆ."

"ಅವನು ಮೋಸಗಾರ ಅಲ್ಲ" ದೃಢವಿಶ್ವಾಸದಿಂದ ನುಡಿದಳು ಸುಲತಾ, "ಅವನು ಏನು ಹೇಳಿದ್ದಾನೋ, ನಿಜಾನೇ ಹೇಳ್ತಿದ್ದಾನೆ. ಅವನ ಮಗ ಯುದ್ಧದಲ್ಲಿ ಸತ್ತೋಗಿದ್ದಾನೆ. ಗೊತ್ತೇ? ಒಬ್ಬನೇ ಮಗನ ಸಾವನ್ನು ಯಾರೂ ಕತೆ ಕಟ್ಟಿ ಹೇಳೋದಿಲ್ಲ. ಅವನಿಗೆ ಯಾರೋ ಹೇಳಿದ್ದಾರೆ, ಯುದ್ಧದಲ್ಲಿ ಸತ್ತವರ ಕುಟುಂಬಕ್ಕೆ ಸರ್ಕಾರ ಪರಿಹಾರ ಕೊಡುತ್ತೆ ಅಂತ. ಅದಕ್ಕೆ ಅವನು ಅರ್ಜಿ ಕೊಡಬೇಕಾಗಿದೆ. ಅವನ ತರ ಬಡಪಾಯಿ, ಅಸಹಾಯಕ ಯಾರಿದ್ದಾರೆ ಹೇಳು ದಾದಾ? ತನ್ನವರು ಅನ್ನೋರು ಯಾರೂ ಇಲ್ಲ. ಸಂಸಾರ ಇಲ್ಲ, ಮನೆ ಇಲ್ಲ, ಅರ್ಜಿ ಬರೆಯೋಕೆ ವಿದ್ಯೆಯೂ ಇಲ್ಲ. ಕೇಳೋಕೆ ದುಃಖ ಆಗಲ್ವೇ ದಾದಾ?"

"ಇಲ್ಲ, ಆಗಲ್ಲ!" ಅಸಿತ್ ಒರಟು ಸ್ವರದಲ್ಲಿ ಹೇಳಿದ, "ಈ ವಿದ್ಯೆಯಿಲ್ಲದ ಅನಕ್ಷರಸ್ಥರು ಯಾವ ರೀತಿ ಕತೆ ಕಟ್ಟಿ ಹೇಳ್ತಾರೆ ಅಂದ್ರೆ ದೊಡ್ಡ ದೊಡ್ಡ ಲೇಖಕರಿಗೂ ಆ ತರ ಬರೆಯೋಕೆ ಆಗಲ್ಲ, ಗೊತ್ತಾ?"

ಸುಲತಾ ಮುಖ ನೋಡಿದರೆ ಅನಿಸುತ್ತೆ ಅವಳು ಇದನ್ನು ಒಪ್ಪಿಕೊಳ್ಳಲಿಲ್ಲ ಅಂತ, "ಗೊತ್ತಾಯ್ತು, ಈಗ ಟೀ ಕುಡಿದು ನನ್ನ ಪಾಡಿಗೆ ನನ್ನ ಬಿಡು, ಆದರೂ ಹೇಳಿಟ್ಟಿರ್ತೀನಿ, ಅವನು ಎಂಟು ಗಂಟೆಗೆ ಬರ್ತಾನೆ. ಏನ್ ಹೇಳಬೇಕು ಅದನ್ನ ನೀನೆ ಅವನಿಗೆ ಹೇಳು. ಹೆಣ್ಮಕ್ಕಳಿಗೆ ಕರುಣೆ ತೋರಿಸೋಕು ಅಧಿಕಾರ ಇಲ್ಲ." ಹೀಗೆ ನುಡಿದು ಅವಳು ಕೊಠಡಿಯೊಳಗೆ ಹೊರಟುಹೋದಳು.

ಎಂಟು ಗಂಟೆಯಾಗಲು ಹೆಚ್ಚು ಸಮಯ ಉಳಿದಿರಲಿಲ್ಲ. ಅಸಿತ್ ಮನಸ್ಸಲ್ಲೇ ಅವನಿಗೆ ಏನು ಹೇಳಬೇಕು ಅಂತ ಯೋಚಿಸುತ್ತಾ ಕೈಕಾಲು ಮುಖ ತೊಳೆದ. ಯಾವ ರೀತಿ ಅವನನ್ನ ಇಲ್ಲಿಂದ ಓಡಿಸೋದು?